# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5019/2022 ಪ್ರಾಸಾ-34

ಚಾಸಾ-50

ದಿನಾಂಕಃ 19-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಸಿದ್ದರಾಮೇಶ್ವರ ಎಸ್. |
| **ತಂದೆಯ / ಗಂಡನ ಹೆಸರು** | ಲೇಟ್ ಶಂಭಣ್ಣ |
| **ವಯಸ್ಸು** | 45 |
| **ಉದ್ಯೋಗ** | ಪೊಲೀಸ್ ಇನ್ಸ್‌ಪೆಕ್ಟರ್ ,<br>ಹೊನ್ನಾವರ ಪೊಲೀಸ್ ಠಾಣೆ |
| **ವಾಸಸ್ಥಳ** | ಹೊನ್ನಾವರ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

**ನಾನು 2021 ಮಾರ್ಚ ರಿಂದ 2022 ಆಗಸ್ಟ್‌ರವರೆಗೆ ಕೊರಟಗೆರೆ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿ.14.02.2022 ರಂದು ಕೇಸಿನ ಕಡತವನ್ನು ಚಾಸಾ-49 ರವರಿಂದ ಪಡೆದುಕೊಂಡು ಅವರು ಅಲ್ಲಿವರೆಗೆ ಮಾಡಿದ ತನಿಖೆ ಪರಿಶೀಲಿಸಿ. ದಿ. 15.02.2022 ರಂದು ಆರೋಪಿತರ ಪತ್ತೆಗಾಗಿ ಸಿಬ್ಬಂಗಳಾದ ಚಾಸಾ-36 ರಿಂದ 39 ರವರುಗಳನ್ನು ನೇಮಕ ಮಾಡಿರುತ್ತೇನೆ. ದಿ. 16.02.2022 ರಂದು ಆರೋಪಿಗಳ ಪತ್ತೆಗೆ ನೇಮಿಸಿದ ಸಿಬ್ಬಂದಿಗಳ ಪೈಕಿ ಚಾಸಾ-36 ಮತ್ತು 37 ರವರು ಆರೋಪಿ ಪುನಿತ್ ರವರನ್ನು ಬೆಳಿಗ್ಗೆ 7-30 ಗಂಟೆಗೆ ನೆಲಮಂಗಲ ತಾಲ್ಲೂಕು , ಮಣ್ಣೆ ಗ್ರಾಮದ ಆರೋಪಿಯ ಮನೆಯಲ್ಲಿ ವಶಕ್ಕೆ ಪಡೆದುಕೊಂಡು ಬೆಳಿಗ್ಗೆ 9-00 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆರೋಪಿ ಪುನಿತ್ ವಿಚಾರಣೆ ಮಾಡಿ ಆತನು ಈ ಪ್ರಕರಣದಲ್ಲಿ ಬಾಗಿಯಾಗಿದ್ದಾರೆ ಎಂದು ಒಪ್ಪಿಕೊಂಡ ಮೇರೆಗೆ ಆತನನ್ನು ಬೆಳಿಗ್ಗೆ 10-00 ಗಂಟೆಗೆ ದಸ್ತಗಿರಿ ಮಾಡಿರುತ್ತೇನೆ.

ಚಾಸಾ-38 ಮತ್ತು 39 ರವರು ಬೆಳಿಗ್ಗೆ 8-45 ಗಂಟೆಗೆ ಆರೋಪಿ ಶೈಲಜಾ ರವರನ್ನು ತುಮಕೂರು ನಗರದ ಹೌಸಿಂಗ್ ಬೋರ್ಡ್ ಕಾಲೋನಿಯ ಆರೋಪಿಯ ದೊಡ್ಡಪ್ಪ ನ ಮಗ ಬ್ರಹ್ಮಚಾರಿ ರವರ ಮನೆಯಿಂದ ಅಳವಳನ್ನು ವಶಕ್ಕೆ ಪಡೆದುಕೊಂಡು ನನ್ನ ಮುಂದೆ ಬೆಳಿಗ್ಗೆ 10-15 ಗಂಟೆಗೆ ಹಾಜರುಪಡಿಸಿರುತ್ತಾರೆ, ಮತ್ತು ನಿಪಿ-38 ರಂತೆ ವರದಿ ನೀಡಿರುತ್ತಾರೆ. ಆರೋಪಿ ಶೈಲಜಾ ವಿಚಾರಣೆ ಮಾಡಿ ಅವಳು ಈ ಪ್ರಕರಣದಲ್ಲಿ ಬಾಗಿಯಾಗಿದ್ದಾರೆ ಎಂದು ಒಪ್ಪಿಕೊಂಡ ಮೇರೆಗೆ ಆಕೆಯನ್ನು ಬೆಳಿಗ್ಗೆ 11-15 ಗಂಟೆಗೆ ದಸ್ತಗಿರಿ ಮಾಡಿರುತ್ತೇನೆ. 1 ನೇ ಆರೋಪಿ ಪುನಿತ್ ವಶದಲ್ಲಿದ್ದಂತಹ ಎಂ.ಐ ಟಚ್ ಸ್ರೀನ್ ಮೊಬೈಲ್ ಮತ್ತು 2 ನೇ ಆರೋಪಿ ಶೈಲಜಾ ರವರ ಕಡೆಯಿಂದ ರೆಡ್ ಮಿ ಕಂಪನಿಯ ಮೊಬೈೇಲ್ ಗಳನ್ನು ಪಂಚರಾದ ಚಾಸಾ-10 ಮತ್ತು 11 ರವರ ಸಮಕ್ಷಮ ಬೆಳಿಗ್ಗೆ 11-30 ರಿಂದ 12-30 ರವರೆಗೆ ಅಮಾನತ್ತು ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ನಿಪಿ-5 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಆರೋಪಿತರ ಸಹಿ ನೋಡಿದರೆ ಗುರುತಿಸುತ್ತೇನೆ, ನಿಪಿ-5 ರ ಮೇಲೆ ಇರುವ ಆರೋಪಿತರ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ಆರೋಪಿತರ ಸಹಿಗಳನ್ನು ನಿಪಿ-5(ಡಿ) ಮತ್ತು ನಿಪಿ-5(ಇ) ಎಂದು ಗುರುತಿಸಲಾಯಿತು. ನಿಪಿ-6 ಮತ್ತು 7 ರಂತೆ ಪೊಟೋ ತೆಗೆದಿರುತ್ತದೆ. ಸದರಿ ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ಆರೋಪಿತರು ಮೊಬೈಲ್ ನಲ್ಲಿ ಪರಸ್ಪರ ಮಾತನಾಡಿ ಕೋಲೆ ಮಾಡುವ ಸಂಚು ರೂಪಿಸಿ ಪರಸ್ವರ ಮೆಸೇಜ್ ಗಳನ್ನು ಕಳುಹಿಸಿರುತ್ತಾರೆ. ಸದರಿ ಮೆಸೇಜ್ ಗಳನ್ನು ಮಹಜರ್ ಸಮಯದಲ್ಲಿ ನೋಡಿರುತ್ತೇವೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಮತ್ತು 2 ಮೊಬೈಲ್‌ಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ ಪುನಿತ್ ನ ಮೊಬೈಲ್ ನ ವಾಲ್ ಪೇಪರ್ ನಲ್ಲಿ ಆರೋಪಿ 1 ಮತ್ತು 2 ರವರ ಜೊತೆ ಇರುವ ಪೊಟೋ ಇರುತ್ತದೆ. ಅಮಾನತ್ತುಪಡಿಸಿಕೊಂಡಿರುವ ಮುದ್ದೆ ಮಾಲುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 28/2022 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 1 ಮತ್ತು 2 ನೇ ಆರೋಪಿತರ ಸ್ವ ಇಚ್ಚೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿ 1 ಮತ್ತು 2 ರವರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ನೀವು ನಮ್ಮ ಹೊಂದಿಗೆ ಬಂದರೆ ಕೃತ್ಯ ನಡೆದ ಸ್ಥಳ ಮತ್ತು ಶವ ಹೂತ ಸ್ಥಳ ತೋರಿಸುತ್ತೇವೆ ಎಂದು ಹೇಳಿರುತ್ತಾರೆ. ನ್ಯಾಯಾಲಯದಲ್ಲಿರುವ 1 ನೇ ಆರೋಪಿ ಸ್ವ ಇಚ್ಛಾ ಹೇಳಿಕೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಸ್ವ ಇಚ್ಛಾ

ಹೇಳಿಕೆಯ ಭಾಗವನ್ನು ನಿಪಿ-47 ಎಂದು, ಸಾಕ್ಷಿ ಸಹಿಯನ್ನು ನಿಪಿ-47(ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿ ಸಹಿಯನ್ನು ನಿಪಿ-47(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ 2 ನೇ ಆರೋಪಿ ಸ್ವ ಇಚ್ಛಾ ಹೇಳಿಕೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಸ್ವ ಇಚ್ಛಾ ಹೇಳಿಕೆಯ ಭಾಗವನ್ನು ನಿಪಿ-48 ಎಂದು, ಸಾಕ್ಷಿ ಸಹಿಯನ್ನು ನಿಪಿ-48(ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿ ಸಹಿಯನ್ನು ನಿಪಿ-48(ಬಿ) ಎಂದು ಗುರುತಿಸಲಾಯಿತು. ಆರೋಪಿಗಳು ಸ್ವ ಇಚ್ಛಾ ಹೇಳಿಕೆಯ ಆಧಾರದ ಮೇರೆಗೆ ಇಬ್ಬರ ಪಂಚರಾದ ಚಾಸಾ-12 ಮತ್ತು 13 ರವರನ್ನು ಮತ್ತು ಆರೋಪಿತರನ್ನು ಕರೆದುಕೊಂಡು , ಆರೋಪಿತರ ಜೊತೆ ಆರೋಪಿತರು ದಾರಿ ತೊರಿಸಿದಂತೆ ಕೊರಟಗೆರೆ ಪಟ್ಟಣದ ಸಜ್ಜನರ ಬೀದಿಯಲ್ಲಿರುವ ಮೃತ ಸುಮಿತ್ರ ಕೋಂ ಲೇಟ್ ಕೃಷ್ಣಚಾರಿ ರವರ ಮನೆ ಹತ್ತಿರ ಹೋಗಿದ್ದು ಮನೆಯ ಒಳಗೆ ಕೃತ್ಯ ನಡೆದ ಸ್ಥಳ ಆರೋಪಿತರು ತೋರಿಸಿರುತ್ತಾರೆ. ಸದರಿ ಸ್ಥಳದ ಪಂಚನಾಮೆಯನ್ನು ಚಾಸಾ-12 ಮತ್ತು 13 ರವರ ಸಮಕ್ಷಮ ನಿಪಿ-18 ರಂತೆ ಪಂಚನಾಮೆ ಮಾಡಿರುತ್ತೇನೆ. ಕೊಲೆ ನಂತರ ಶವವನ್ನು ನೀರಿನ ಸಂಪಿನಲ್ಲಿ ಹಾಕಿದ್ದು ಅದನ್ನು ಹೊರ ತೆಗೆದ ಮೇಲೆ ನೀರಿನ ಸಂಪಿಗೆ ಕಬ್ಬಿಣ ಜಾಲರಿ ಮಾಡಿ ಸೀಮೆಂಟ್ ಮಾಡಿದ್ದು ಅದನ್ನು ಚಾಸಾ-14 ರವರ ಮುಖೇನ ಅದನ್ನು ಕಬ್ಬಿಣದ ಜಾಲರಿಯನ್ನು ತೆಗೆಸಿರುತ್ತೇವೆ.

ನಿಪಿ-8 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-8(ಇ) ಎಂದು ಗುರುತಿಸಲಾಯಿತು. ನಿಪಿ-8 ರ ಮೇಲೆ ಆರೋಪಿತರ ಸಹಿ ಇದ್ದು ಆರೊಪಿಗಳ ಸಹಿಗಳನ್ನು ನಿಪಿ-8(ಎಫ್) ಮತ್ತು ನಿಪಿ-8(ಜಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ನಿಪಿ-9 ರಿಂದ 11 ರಂತೆ ಪೊಟೋ ತೆಗೆದಿರುತ್ತದೆ. ನಿಪಿ-9 ರಿಂದ 11 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಂತರ ಆರೋಪಿತರು ಶವ ಹೂತ ಮಾಡಿದ ಜಾಗ ತೋರಿಸಿರುತ್ತೇವೆ ಎಂದು ನಮ್ಮನ್ನು ಕೊರಟಗೆರೆ ಪಟ್ಟಣದ ಮಲ್ಲೇಶ್ವರಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿರುವ ರುದ್ರಭೂಮಿಗೆ ಕರೆದುಕೊಂಡು ಹೋಗಿದ್ದು ಇದೇ ಜಾಗದಲ್ಲಿ ಶವ ಹೂತದ್ದಾಗಿ ಹೇಳಿರುತ್ತಾರೆ. ನಂತರ ಚಾಸಾ-15 ಮತ್ತು 16 ಮತ್ತು ಚಾಸಾ-1 ಮತ್ತು 2 ರವರ ಸಮಕ್ಷಮ ಮದ್ಯಾಹ್ನ 2-30 ರಿಂದ 3-30 ಗಂಟೆಯವರೆಗೆ ಶವ ಹೂತ ಸ್ಥಳದ ಪಂಚನಾಮೆಯನ್ನು ನಿಪಿ-2 ರಂತೆ ಮಾಡಿರುತ್ತೇವೆ. ನಿಪಿ-2 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-2(ಎಫ್) ಎಂದು ಗುರುತಿಸಲಾಯಿತು. ಆರೋಪಿತರ ಸಹಿಗಳನ್ನು ನಿಪಿ-2(ಜಿ) ಮತ್ತು ನಿಪಿ-2(ಹೆಚ್) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ನಿಪಿ-3 ರಂತೆ ಪೊಟೋ ತೆಗೆದಿರುತ್ತದೆ, ನಿಪಿ-3 ಪೋಟೋ ನೋಡಿ ಗುರುತಿಸಿರುತ್ತಾರೆ.

ನಂತರ ಸದರಿ ಸ್ಥಳದ ಸುರಕ್ಷತೆಗಾಗಿ ಚಾಸಾ- 41 ಮತ್ತು 42 ರವರನ್ನು ನೇಮಕ ಮಾಡಿರುತ್ತೇನೆ. ನಂತರ ಆರೋಪಿಗಳು ಕೃತ್ಯದ ಸಮಯದಲ್ಲಿ ಮೃತಳಿಂದ 1 ನೇ ಆರೋಪಿಗೆ ಮೂಗಿನ ಮೇಲೆ ಮತ್ತು 2 ನೇ ಆರೋಪಿಗೆ ಕೈ ಮೇಲೆ ತರಚಿದ ಗಾಯಗಳು ಆಗಿದ್ದು ಅದನ್ನು ಪರೀಕ್ಷಿಸಿ ವರದಿ ನೀಡಲು ವೈದ್ಯಾಧಿಕಾರಿಗಳಿಗೆ ಮನವಿ ಕೊಟ್ಟಿರುತ್ತೇನೆ. ವೈದ್ಯಕೀಯ ಪರೀಕ್ಷೆ ನಂತರ ರಿಮ್ಯಾಂಡ್ ಅರ್ಜಿಯೊಂದಿಗೆ ಆರೋಪಿತರನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಮೃತ ಸುಮಿತ್ರಾ ಇವರ ಶವವನ್ನು ಹೊರತೆಗೆಯಲು ಉಪ-ವಿಭಾಗಾಧಿಕಾರಿಗಳಿಗೆ ಆದೇಶ ಮಾಡುವಂತೆ ನ್ಯಾಯಾಲಯಕ್ಕೆ ಮನವಿಕೊಟ್ಟಿರುತ್ತೇನೆ.

ದಿ. 17.02.2022 ರಂದು ಮಾನ್ಯ ನ್ಯಾಯಾಲಯವು ಹೂತಿರುವ ಹೆಣವನ್ನು ಹೊರತೆಗೆಯಲು ಉಪ-ವಿಭಾಗಾಧಿಕಾರಿಗಳಿಗೆ ಆದೇಶ ಮಾಡಿರುತ್ತದೆ. ನ್ಯಾಯಾಲಯದಲ್ಲಿರುವ ಜೆ.ಎಂ.ಎಫ್.ಸಿ ಗೆ ನೀಡಿದ ಮನವಿ ಪತ್ರವನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಮನವಿ ಪತ್ರವನ್ನು ನಿಪಿ-49 ಎಂದು, ಸಾಕ್ಷಿ ಸಹಿಯನ್ನು ನಿಪಿ-49(ಎ) ಎಂದು ಗುರುತಿಸಲಾಯಿತು.

ದಿ. 17.02.2022 ರಂದು ಉಪ-ವಿಭಾಗಾಧಿಕಾರಿ ಮಧುಗಿರಿ ರವರಿಗೆ ಮಾನ್ಯ ನ್ಯಾಯಾಲಯದ ಆದೇಶದ ಶವವನ್ನು ಹೊರತೆಗೆಯಲು ದಿನಾಂಕವನ್ನು ನಿಗದಿಪಡಿಸುವ ಕೋರಿರುತ್ತೇನೆ. ನ್ಯಾಯಾಲಯದಲ್ಲಿರುವ ಉಪ-ವಿಭಾಗಾದಿಕಾರಿಗಳಿಗೆ ಸಲ್ಲಿಸಿದ ಮನವಿ ಪತ್ರವನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಉಪ-ವಿಭಾಗಾದಿಕಾರಿಗಳಿಗೆ ಸಲ್ಲಿಸಿದ ಮನವಿ ಪತ್ರವನ್ನು ನಿಪಿ-50 ಎಂದು, ಸಾಕ್ಷಿ ಸಹಿಯನ್ನು ನಿಪಿ-50(ಎ) ಎಂದು ಗುರುತಿಸಲಾಯಿತು. ನಂತರ ತುಮಕೂರು ಜಿಲ್ಲಾ ಆಸ್ಪತ್ರೆಗೆ forensic ತಜ್ಞರನ್ನು ಹಾಜರುರಿರುವಂತೆ ಕೋರಿ ಮನವಿ ಕೊಟ್ಟಿರುತ್ತೇನೆ. ಅದೇ ದಿನ ಉಪ-ವಿಭಾಗಾಧಿಕಾರಿಗಳು ಕೊರಗೆರೆ ತಹಸೀಲ್ದಾರ್ ರವರಿಗೆ ಆದೇಶ ನೀಡಿರುತ್ತಾರೆ. ನಿಪಿ-46 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-46(ಎ) ಎಂದು ಗುರುತಿಸಲಾಯಿತು.

ದಿ. 18.02.2022 ರಂದು ಈ ಪ್ರಕರಣದ 1 ನೇ ಆರೋಪಿಯನ್ನು ತನಿಖೆಗಾಗಿ ಪೊಲೀಸ ಅಭಿರಕ್ಷೆಗೆ ಕೊಡುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ 1 ನೇ ಆರೋಪಿಯನ್ನು ಪೊಲೀಸ್ ಅಭಿರಕ್ಷೆಗೆ

ಪಡೆದುಕೊಂಡಿರುತ್ತೇನೆ.

ದಿ. 19.02.2022 ರಂದು 1 ನೇ ಆರೋಪಿ ತೋರಿಸಿದಂತೆ ಕೊರಟಗೆರೆ ಟೌನ್ ಮಲ್ಲೇಶಪುರ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ತೋರಿಸಿದಂತೆ ಚಾಸಾ-17 ಮತ್ತು 18 ರವರ ಸಮಕ್ಷಮ ತಹಸೀಲ್ದಾರ್ ಕೊರಟಗೆರೆ ರವರು ಶವ ಹೊರತೆಗೆಯುವ ಪಂಚನಾಮೆ ಮತ್ತು ಪ್ರಕ್ರಿಯೆನ್ನು ಕೈಗೊಂಡು ಮದ್ಯಾಹ್ನ 10-30 ರಿಂದ 11-30 ಗಂಟೆಯವರೆಗೆ ಮಾಡಿರುತ್ತಾರೆ. ನಿಪಿ-13 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-13(ಎಫ್) ಎಂದು ಗುರುತಿಸಲಾಯಿತು. ನಿಪಿ-13 ರ ಕಾಲಕ್ಕೆ ಪೊಟೋ ತೆಗೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ನಿಪಿ-14 ರಿಂದ 26 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-14 ಮತ್ತು 15 ರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಶವ ಹೊರತೆಗೆದ ನಂತರ 11-45 ರಿಂದ 1-45 ಗಂಟೆಯವರೆಗೆ ಶವ ತನಿಖೆಯನ್ನು ತಹಸೀಲ್ದಾರ್ ರವರು ಕೈಗೊಂಡಿರುತ್ತಾರೆ.

ನಂತರ 1 ನೇ ಆರೋಪಿ ಪುನಿತ್ ರವರ ವೈದ್ಯಕೀಯ ಪರೀಕ್ಷೆ ಮಾಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿ. 20.02.2022 ರಂದು ಮೃತಳ ಅಕ್ಕ ಪಕ್ಕದ ಮನೆಯವರಾಗದ ಚಾಸಾ-25 ಮತ್ತು 26 ಮತ್ತು ಸಂಬಂಧಿಕರಾದ ಚಾಸಾ-2 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ. 21.02.2022 ರಂದು ಸಾಕ್ಷಿದಾರರಾದ ಚಾಸಾ-28 ರಿಂದ 31 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಕೊರಟಗೆರೆ ಪಟ್ಟಣ ಪಂಚಾಯಿತಿಗೆ ಕೃತ್ಯ ನಡೆದ ಸ್ಥಳ ಖಾತಾ ಎಕ್ಸ್ಟ್ರಾಕ್ಟ್ ನೀಡುವಂತೆ ಮನವಿ ಸಲ್ಲಿಸಿರುತ್ತೇನೆ ಮತ್ತು ಲೋಕೋಪಯೋಗಿ ಇಲಾಖೆಗೆ ನಕ್ಷೆ ತಯಾರಿಸಿ ಕೊಡಲು ಕೋರಿರುತ್ತೇನೆ.

ದಿ. 02.03.2022 ರಂದು ಮೃತ ಸುಮಿತ್ರಾ ರವರ ಶವ ಪರೀಕ್ಷಾ ಕಾಲದಲ್ಲಿ ವೈದ್ಯಾಧಿಕಾರಿಗಳು ಸಂಗ್ರಹಿಸಿದ ವಸ್ತುಗಳನ್ನು ಮತ್ತು ಪಿ.ಎಂ. ವರದಿಯನ್ನು ತರುವಂತೆ ಚಾಸಾ-45 ರವರನ್ನು ನೇಮಿಸಿದ್ದು ಅವರು 1 ರಿಂದ 12 ವಸ್ತುಗಳನ್ನು ಅದೇ ದಿನ ಮತ್ತು ಪಿ.ಎಂ. ವರದಿಯನ್ನು ಹಾಜರುಪಡಿಸಿ ವದಿರಯನ್ನು ನೀಡಿರುತ್ತಾರೆ. ನ್ಯಾಯಾಲಯದಲ್ಲಿರುವ ವರದಿಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ವರದಿಯನ್ನು ನಿಪಿ-51 ಎಂದು, ಸಾಕ್ಷಿ ಸಹಿಯನ್ನು ನಿಪಿ-51(ಎ) ಎಂದು ಗುರುತಿಸಲಾಯಿತು. ಮರಣೋತ್ತರ ಪರೀಕ್ಷೆ ವರದಿಯನ್ನು ನೋಡಿದೇನು ಅದನ್ನು ಈಗಾಗಲೇ ನಿಪಿ-34 ಎಂದು

ಗುರುತಿಸಲಾಗಿದ್ದು. ನಿಪಿ-34 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-34(ಬಿ) ಎಂದು ಗುರುತಿಸಲಾಯಿತು.

ಸ್ವಿಕರಿಸಿದ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 35/2022 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-3 ರಿಂದ 10 ನ್ನು ನೋಡಿ ಗುರುತಿಸಿರುತ್ತಾರೆ.

ದಿ. 04.03.2022 ರಂದು ಅಮಾನತ್ತು ಪಡಿಸಿಕೊಂಡ ಮುದ್ದೆ ಮಾಲುಗಳನ್ನು ಬೆಂಗಳೂರಿನ ವಿಧಿ ವಿಜ್ಞಾನ ಪ್ರಯೋಗಾಲಯ, ಬೆಂಗಳೂರಿಗೆ ಚಾಸಾ-46 ರವರ ಮುಖೇನ ಕಳುಹಿಸಿಕೊಟ್ಟಿರುತ್ತೇನೆ. ದಿ. 05.03.2022 ರಂದು ಚಾಸಾ-46 ರವರು ಎಫ್.ಎಸ್.ಎಲ್. ರವರು ನೀಡಿದ ಸ್ವಿಕೃತಿಯನ್ನು ಹಾಜರುಪಡಿಸಿರುತ್ತಾರೆ. ನ್ಯಾಯಾಲಯದಲ್ಲಿರುವ ಎಫ್.ಎಸ್.ಎಲ್. ಸ್ವೀಕೃತಿಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಎಫ್.ಎಸ್.ಎಲ್. ಸ್ವೀಕೃತಿಯನ್ನು ನಿಪಿ-52 ಎಂದು, ಸಾಕ್ಷಿ ಸಹಿಯನ್ನು ನಿಪಿ-52(ಎ) ಎಂದು ಗುರುತಿಸಲಾಯಿತು.

ದಿ. 130.03.2022 ರಂದು ಸಾಕ್ಷಿದಾರರಾದ ಚಾಸಾ-10, 11, 12, 13, 14, 15, 16, 17 18, 19, 20 ಮತ್ತು 21 ರವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ. 14.03.2022 ರಂದು ಸಾಕ್ಷಿದಾರರಾದ ಚಾಸಾ-36, 39 ರಿಂದ 44 ರವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ. 08.04.2022 ರಂದು ಲೋಕೋಪಯೋ ಇಲಾಖೆಯಿಂದ ನಕ್ಷೆಯನ್ನು ಪಡೆದುಕೊಂಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಕವಚ ಪತ್ರ ಮತ್ತು ನಕ್ಷೆ ನೋಡಿದ್ದು ನಿಪಿ-30 ರ ಮೇಲೆ ನನ್ನ ಸ್ವಿಕೃತಿ ಸಹಿ ಇರುತ್ತದೆ. ಸದರಿ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು. ಸದರಿ ನಕ್ಷೆಯನ್ನು ಹಾಜರುಪಡಿಸಿದಂತಹ ಚಾಸಾ-37 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿ. 10.05.2022 ರಂದು 1 ಮತ್ತು 2 ನೇ ಆರೋಪಿತರ ಗಾಯದ ಪ್ರಮಾಣ ಪತ್ರವನ್ನು ನಿಪಿ-36 ಮತ್ತು 37 ರಂತೆ ಪಡೆದುಕೊಂಡಿರುತ್ತೇನೆ. ನಿಪಿ-36 ಮತ್ತು 37 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-36(ಬಿ) ಮತ್ತು ನಿಪಿ-37(ಬಿ) ಎಂದು

ಗುರುತಿಸಲಾಯಿತು. ಅದೇ ದಿನ ಕೊರಟಗೆರೆ ಪಟ್ಟಣ ಪಂಚಾಯಿತಿಯಿಂದ ಕೃತ್ಯ ನಡೆದ ಸ್ಥಳದ ದಾಖಲಾತಿಯನ್ನು ನಿಪಿ-32 ಮತ್ತು ನಿಪಿ-33 ರಂತೆ ಪಡೆದುಕೊಂಡಿರುತ್ತೇನೆ. ನಿಪಿ-32 ರ ಕವಚದ ಮೇಲೆ ನನ್ನ ಸ್ವೀಕೃತ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ-32(ಬಿ) ಎಂದು ಗುರುತಿಸಲಾಯಿತು. ನಿಪಿ-33 ರಲ್ಲಿ ಮೃತ ಸುಮಿತ್ರಾಳ ಗಂಡ ಕೃಷ್ಣಚಾರ್ ಬಿನ್ ನರಸಿಂಹಚಾರ್ ಹೆಸರಿನಲ್ಲಿ ಸ್ವತ್ತು ಇರುತ್ತದೆ ಎಂದು ಕಂಡುಬರುತ್ತದೆ. ಈ ಪ್ರಕರಣದಲ್ಲಿ ತನಿಖೆಯು ಭಾಗಶಃ ಮುಕ್ತಾಯಗೊಂಡಿದ್ದರಿಂದ ಆರೋಪಿಗಳ ವಿರುದ್ಧ ಆರೋಪ ದೃಢಪಟ್ಟಿದ್ದರಿಂದ ಎಫ್.ಎಸ್.ಎಲ್. ಮತ್ತು ಮೊಬೈಲ್ , forensic ಮತ್ತು ಡಿ.ಎನ್. ರಕ್ತದ ಮಾದರಿಗಳನ್ನು ಮುಲ್ಕಿ ಇಟ್ಟು ನ್ಯಾಯಾಲಯಕ್ಕೆ ದೋಷರೋಪಣ ಪತ್ರ ಸಲ್ಲಿಸಿರುತ್ತೇನೆ. ವಿ.ಸಿ. ಮುಖಾಂತರ ಹಾಜರುಪಡಿಸಿರುವ ಇಬ್ಬರು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ದಿ. 18.05.2022 ರಂದು ಪಟ್ಟಣಪಂಚಾಯಿತಿ ಇಂದ ರುದ್ರಭೂಮಿ ಸರ್ಕಾರಿ ಜಾಗ ಎಂದು ದೃಢೀಕರಣ ಪತ್ರ ಪಡೆದುಕೊಂಡು ಕಡತವಕ್ಕೆ ಅಳವಡಿಸಿಕೊಂಡಿರುತ್ತೇನೆ. ನ್ಯಾಯಾಲಯದಲ್ಲಿರುವ ದಾಖಲೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ-53 ಎಂದು, ಸಾಕ್ಷಿ ಸಹಿಯನ್ನು ನಿಪಿ-53(ಎ) ಎಂದು ಗುರುತಿಸಲಾಯಿತು. ದಿ.13.07.2022 ರಂದು ಅಮಾನತ್ತುಪಡಿಸಿಕೊಂಡಂತಹ ಮೊಬೈಲ್ ಗಳನ್ನು ರಿಟ್ರೀಂ/ಎಕ್ಸ್ಟ್ರಾಕ್ಟ್ ಮಾಡಲು ಸಿ.ಎಂ. ಪೊಲೀಸ್ ಠಾಣೆ ತುಮಕೂರು ರವರಿಗೆ ಕೋರಿಕೆ ಸಲ್ಲಿಸಿ ಅದೇ ದಿನ ಮೊಬೈಲ್ ಗಳನ್ನು ಪಂಚರ ಸಮಕ್ಷಮ ಎಕ್ಸ್ಟ್ರಾಕ್ಟ್ ಮಾಡುವಂತ ತಜ್ಞರಿಗೆ ನೀಡಿ ಮಹಜರ್ ಮಾಡಿರುತ್ತೇನೆ. ಎಕ್ಸ್ಟ್ರಾಕ್ಟ್ ಮಾಡಿದ ನಂತರ ನನಗೆ ಮೊಬೈಲ್ ಗಳನ್ನು ವಾಪಸ್ಸು ಕೊಟ್ಟಿದ್ದು ಅದರಕ್ಕೆ ಮಹಜರ್ ಮಾಡಿರುತ್ತೇನೆ. ಸದರಿ ಎರಡು ಮೊಬೈಲ್ ಗಳನ್ನು ಡೆಟಾ ಗಳನ್ನು ಪೆನ್ ಡ್ರೈವ್ ನಲ್ಲಿ ಸಂಗ್ರಹಿಸಿ ಪಡೆದುಕೊಂಡಿರುತ್ತೇನೆ. ಡೆಟಾ ಎಕ್ಸ್ಟ್ರಾಕ್ಷನ್ ಮಾಡಿಸಿದ ಪಂಚನಾಮೆ ನಿಪಿ-41 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-41(ಬಿ) ಎಂದು ಗುರುತಿಸಲಾಯಿತು.

ದಿ. 04.08.2022 ರಂದು ಮೃತ ಸುವಿತ್ರಾ ಇವರ ಗುರುತು ಪತ್ತೆ ಹಚ್ಚಲು ಅವಳ ಮಗಳಾದ ಚಾಸಾ-1 ರವರ ರಕ್ತದ ಮಾದರಿಯನ್ನು ಮಾನ್ಯ ನ್ಯಾಯಾಲಯದಲ್ಲಿ ಸಂಗ್ರಹಿಸಿ ಠಾಣಾ ಮಾಲು ಪಟ್ಟಿ ಸಂಖ್ಯೆ 133/2022 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯದ ಆದೇಶ

ಪಡೆದುಕೊಂಡಿರುತ್ತೇನೆ. ಆ ಸಮಯದಲ್ಲಿ ನಿಪಿ-4 ರಂತೆ ಮಹಜರ್ ಮಾಡಿದ್ದು ಅದರ ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು.

ದಿ. 05.08.2022 ರಂದು ವಶಪಡಿಸಿಕೊಂಡಿದ್ದ ರಕ್ತದ ಮಾದರಿಗಳನ್ನು ಪಿ.ಸಿ-406 ಶ್ರೀಧರ್ ರವರ ಮುಖಾಂತರ ಎಫ್.ಎಸ್.ಎಲ್. ಗೆ ಡಿ.ಎನ್.ಎ. ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ತನಿಖೆ ಸಮಯದಲ್ಲಿ ಎಫ್.ಎಸ್.ಎಲ್. ನಿಂದ ಬಂದತಹ ವರದಿಯನ್ನು ಸ್ವೀಕರಿಸಿರುತ್ತೇನೆ. ದಿ. 19.03.2022 ರ ನ್ಯಾಯಾಲಯದಲ್ಲಿರುವ ಎಫ್.ಎಸ್.ಎಲ್. ವರದಿಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಎಫ್.ಎಸ್.ಎಲ್. ವರದಿಯನ್ನು ನಿಪಿ-54 ಎಂದು, ಸಾಕ್ಷಿ ಸಹಿಯನ್ನು ನಿಪಿ-54(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಎಫ್.ಎಸ್.ಎಲ್. ವರದಿ ದಿ.30.04.2022 ರ ನಿಪಿ-35 ನೋಡಿ ನಿಪಿ-35 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು.

ತನಿಖೆ ಸಮಯದಲ್ಲಿ ತನಿಖಾ ಸಹಾಯಕ ರವರಿಂದ ಕಲಂ 65(ಬಿ) ಅಡಿಯಲ್ಲಿ ಪ್ರಮಾಣ ಪತ್ರಿಕೆಯನ್ನು ನಿಪಿ-39, 44 ಮತ್ತು 45 ರಂತೆ ಪಡೆದುಕೊಂಡಿರುತ್ತೇನೆ. ನಿಪಿ-39, 44 ಮತ್ತು 45 ಗಳನ್ನು ನೋಡಿ ಅದರಲ್ಲಿ ತಮ್ಮ ಸಹಿಗಳನ್ನು ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ನಿಪಿ-39(ಬಿ) , 44(ಬಿ) ಮತ್ತು 45 (ಬಿ) ಎಂದು ಗುರುತಿಸಲಾಯಿತು. ಮತ್ತು ತನಿಖೆ ಕಾಲದಲ್ಲಿ ಚಿತ್ರಕರಣ ಮಾಡಿರುವ ಬಗ್ಗೆ ಡಿ.ವಿ.ಡಿ ನಿಪಿ-40 ನೋಡಿ ಗುರುತಿಸಿರುತ್ತಾರೆ. ನಿಪಿ-41 ಪಂಚನಾಮೆಯನ್ನು ಬೆರಳಚ್ಚು ಮಾಡಿ ಪ್ರಿಂಟ್ ತೆಗೆದ ಬಗ್ಗೆ ಚಾಸಾ-43 ರವರು 65(ಬಿ) ಪ್ರಮಾಣ ಪತ್ರವನ್ನು ಕೊಟ್ಟಿರುತ್ತಾರೆ. ನ್ಯಾಯಾಲಯದಲ್ಲಿರುವ ಕಲಂ 65(ಬಿ) ಪ್ರಮಾಣಪತ್ರವನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಕಲಂ 65(ಬಿ) ಪ್ರಮಾಣಪತ್ರವನ್ನು ನಿಪಿ-55 ಎಂದು, ಸಾಕ್ಷಿ ಸಹಿಯನ್ನು ನಿಪಿ-55(ಎ) ಎಂದು ಗುರುತಿಸಲಾಯಿತು. ನನ್ನ ತನಿಖಾ ಕಾಲದಲ್ಲಿ 1 ಮತ್ತು 2 ನೇ ಆರೋಪಿತರು ಕೊಲೆಗೆ ಸಂಚು ರೂಪಿಸಿ ಉಸಿರುಗಟ್ಟಿಸಿ ಕೊಲೆ ಮಾಡಿ ಸಂಪಿನಲ್ಲಿ ಮುಳುಗಿಸಿ ಸಂಪಿನಲ್ಲಿ ಶವವನ್ನು ಹಾಕಿ ನೀರಿನಲ್ಲಿ ಮುಳುಗಿ ತೀರಿಕೊಂಡಿರುತ್ತಾರೆಂದು ಬಿಂಬಿಸಿ ಸಾಕ್ಷ್ಯನಾಶಪಡಿಸಿರುತ್ತಾರೆಂದು ಕಂಡುಬಂದಿರುತ್ತದೆ.

**ಪಾಟೀಸವಾಲು ಶ್ರೀ. ಎಂ.ಎಂ. ವಕೀಲರಿಂದ ಆರೋಪಿ ಪರವಾಗಿ:-**

1 ನೇ ಆರೋಪಿ ತಲೆಮರೆಸಿಕೊಂಡಿರಲಿಲ್ಲ ಮಣ್ಣೆಯಲ್ಲಿರುವ ತನ್ನ ಮನೆಯಲ್ಲಿಯೇ ಇದ್ದ ಎನ್ನುವುದು ನಿಜ. 1 ನೇ ಆರೋಪಿಗೆ ನಾನು ಪೋನ್ ಮಾಡಿದ್ದರಿಂದ ಆತನೇ ನೇರವಾಗಿ ಠಾಣೆಗೆ ಬಂದಿರುತ್ತಾನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಶೈಲಜಾ ತನ್ನ ಸ್ವಂತ ದೊಡ್ಡಪ್ಪನ ಮಗನ ಮನೆಯಲ್ಲಿ ಇದ್ದರು ಎಲ್ಲಿಯೂ ತಲೆಮರೆಸಿಕೊಂಡಿರಲಿಲ್ಲ ಎಂದರೆ ನಿಜ.

ಆರೋಪಿತರು ತಾವು ಕೃತ್ಯವೆಸೆಗಿದ ಬಗ್ಗೆ ಯಾವುದೇ ಒಪ್ಪಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ 1 ಮತ್ತು 2 ವಯಸ್ಕರು ಎನ್ನುವುದು ನಿಜ. 1 ನೇ ಆರೋಪಿ ಡಿಪ್ಲಮೊ ಓದಿರುತ್ತಾನೆ ಎಂದರೆ ನಿಜ. 2 ನೇ ಆರೋಪಿ ಬಿ.ಕಾಂ ಓದಿರುತ್ತಾಳೆ ಎಂದರೆ ನನಗೆ ಮಾಹಿತಿ ಇಲ್ಲ. ಆರೋಪಿತರಿಗೆ ಯಾವುದೇ ಕ್ರಿಮಿನಲ್ ಹಿನ್ನೆಲೆಯಲ್ಲಿ ಇರುವುದಿಲ್ಲ ಎಂದರೆ ನನ್ನ ತನಿಖೆಯಲ್ಲಿ ಕಂಡುಬಂದಿರುವುದಿಲ್ಲ. ಆರೋಪಿತರು ಸುಮಿತ್ರಾರವರನ್ನು ಕೊಲೆ ಮಾಡಬೇಕು ಎಂದು ಯಾವುದೇ ಸಂಚು ರೂಪಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಇಬ್ಬರು ಪ್ರೀತಿಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಕೊಲೆ ನಡೆದಿದೆ ಎಂದು ಹೇಳಲಾದ ಮನೆ ಕೊರಟಗೆರೆ ಬಸ್ ನಿಲ್ದಾಣಕ್ಕೆ ಸಮಿಪದಲ್ಲಿ ಇರುತ್ತದೆ ಎನ್ನುವುದು ನಿಜ. ಸದರಿ ಮನೆ 2 ನೇ ಆರೋಪಿ ಮತ್ತು ಚಾಸಾ-1 ರವರಿಗೆ ಸೇರಿದ ಮನೆ ಎನ್ನುವುದು ನಿಜ. ಘಟನೆ ನಡೆದಿದೆ ಎಂದು ಹೇಳುವ ಸಮಯದಲ್ಲಿ ಸದರಿ ಮನೆಯ ಬೆಲೆ 80 ಲಕ್ಷದಿಂದ 1 ಕೋಟಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

2 ನೇ ಆರೋಪಿ ಮತ್ತು ಚಾಸಾ-1 ರವರಿಗೆ ಸೇರಿದ ಒಂದು ನಿವೇಶನ ಕೊರಟಗೆರೆ ತಹಸೀಲ್ದಾರ್ ಕಚೇರಿಯ ಹಿಂಭಾಗದಲ್ಲಿ ಇರುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ. ಚಾಸಾ-1 ಮತ್ತು ಆರೋಪಿ-2 ರವರ ತಂದೆ ಆರೋಪಿ-2 ರವರಿಗೆ 50 ರಿಂದ 60 ಲಕ್ಷ ಬಂಗಾರದ ವಡವೆಗಳನ್ನು ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಮತ್ತು 2 ನೇ ಆರೋಪಿ ಪ್ರಿತಿ ಮಾಡುತ್ತಿದ್ದರು ಮೃತ ಸುಮಿತ್ರಾಮ್ಮ ಅಡ್ಡಿಪಡಿಸಿದ್ದರಿಂದ 1 ನೇ ಆರೋಪಿ ಆಗಾಗ ಗಲಾಟೆ ಮಾಡಿದ್ದ ಎನ್ನುವ ಬಗ್ಗೆ ಚಾಸಾ-1 ರವರು ಆಗಲೀ ಮೃತ ಸುಮಿತ್ರಮ್ಮ ಆಗಲೀ ಪಿರ್ಯಾದಿ ಕೊಟ್ಟಿರುವುದಿಲ್ಲ. ಆರೊಪಿ 1 ಮತ್ತು 2 ರವರು ಮೊಬೈಲ್ ನಲ್ಲಿ ಯಾವುದೇ ಮೆಸೇಜ್ ಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ನಿಜವಾಗಿ ಪ್ರೀತಿ ಮಾಡುತ್ತಿದ್ದರೆ ಅವರಿಬ್ಬರು ವಯಸ್ಕರು ಆಗಿದ್ದರಿಂದ ಮದುವೆ ಆಗಬಹುದು ಎಂದರೆ ಅವರಿಬ್ಬರು ಸಂಬಂಧದಲ್ಲಿ ಅಣ್ಣ ತಂಗಿ ಆಗುವುದರಿಂದ ಅವರ ಸಂಬಧಿಕರ ವಿರೋಧ ಇತ್ತು ಎಂದು ನನಗೆ ತನಿಖೆಯಲ್ಲಿ ಕಂಡು ಬಂದಿರುತ್ತದೆ. ಆರೋಪಿತರಿಬ್ಬರು ಯಾವುದೇ ರೀತಿಯ ಪ್ರೀತಿ ಮಾಡಿರುವುದಿಲ್ಲ ಮತ್ತು ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸುಮಿತ್ರಮ್ಮ

ರವರು ಸಂಪಿನಿಂದ ನೀರು ತೆಗೆದುಕೊಳ್ಳಲು ಹೋಗಿ ಸಂಪಿನಲ್ಲಿ ಬಿದ್ದು ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮರಣೋತ್ತರ ಪರೀಕ್ಷೆ ವರದಿಯಲ್ಲಿ ಕುತ್ತಿಗೆ ಭಾಗದಲ್ಲಿ ಲೆಗೇಚರ್ ಮಾರ್ಕ್ ನ ಗುರುತು ಇದೆ ಎಂದು ಬರೆದಿರುತ್ತದೆ. ಸಂಪಿನಿಂದ ನೀರು ತೆಗೆದುಕೊಳ್ಳಲು ಹೋಗಿ ಬಿದ್ದಾಗ ಕಟ್ಟೆ ಕುತ್ತಿಗೆಗೆ ಒತ್ತಿದರೆ ಮರಣೋತ್ತರ ಪರೀಕ್ಷೆ ವರದಿಯಲ್ಲಿ ಬರೆದಿರುವಂತಹ ಲೇಗೆಚರ್ ಮಾರ್ಕ್ ಆಗುವಂತ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ.

ಸೀಮೆಂಟ್ ನಿಂದ ಮೇಲ್ಭಾಗದ ಮುಚ್ಚಳವನ್ನು ಪ್ಲಾಸ್ಟಿಂಗ್ ಮಾಡಿದರೆ ಅದನ್ನು ಹೊಡೆಯಲು ಹಾರೆ ಬಳಸಬೇಕಾಗುತ್ತದೆ ಎನ್ನುವುದು ನಿಜ. ನಮ್ಮ ತನಿಖೆ ಕಾಲಕ್ಕೆ ಯೋಗಾನಂದ ಹಾರೆಯನ್ನು ಬಳಸಿ ಅದನ್ನು ತೆಗೆದಿರುತ್ತಾರೆ. 1 ನೇ ಆರೋಪಿ ಸಂಪಿನ ಮುಚ್ಚಳಕ್ಕೆ ಸೀಮೆಂಟ್ ಪ್ಲಾಸ್ಟಿಂಗ್ ಮಾಡಿದ್ದಾರೆ ಎಂದು ಹೇಳುವ ಕರಣೆ, ಸಲಕೆ ಇವುಗಳನ್ನು ಅಮಾನತ್ತುಪಡಿಸಿಕೊಂಡಿದ್ದೀರಾ ಎಂದರೆ ಇಲ್ಲ. 1 ನೇ ಆರೋಪಿ ಪ್ಲಾಸ್ಟಿಂಗ್ ಮಾಡಿದ್ದಾನೆ ಎಂದು ಹೇಳಲು ಎಲ್ಲಿ ಸೀಮೆಂಟ್ ತಂದಿರುತ್ತಾನೆ ಮತ್ತು ಮರಳು ತಂದಿರುತ್ತಾನೆಂದು ನಾನು ವಿಚಾರಣ ಮಾಡಿರುವುದಿಲ್ಲ. ಶವವನ್ನು ಸಂಪಿನಿಂದ ಹೊರ ತೆಗೆದ ನಂತರ 1 ನೇ ಆರೋಪಿ ಕಬ್ಬಿಣದ ಜಾಲರಿ ಹಾಕಿ ಸೀಮೆಂಟ್ ಮಾಡಿ ಸಂಪನ್ನು ಮುಚ್ಚಿರುತ್ತಾನೆ. ಸುಮಿತ್ರಮ್ಮ ತೆರೆದ ಸಂಪಿನಲ್ಲಿ ಬಿದ್ದು ಸತ್ತಿರುವುದರಿಂದ 1 ನೇ ಆರೋಪಿಗೆ ಕಬ್ಬಿಣದ ಜಾಲರಿನಿಂದ ಮುಚ್ಚಿ ಸೀಮೆಂಟ್ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ಶವವನ್ನು ಸಂಪಿನಿಂದ ಹೊರತೆಗೆದ ಮೇಲೆ ಕಬ್ಬಿಣದ ಜಾಲರಿ ಹಾಕಿ ಸೀಮೆಂಟ್ ಮಾಡಿ ಸಂಪನ್ನು ಮುಚ್ಚಿವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ-1 ಮತ್ತು 2 ರವರು ಹೇಳಿದ ರೀತಿ ನಾವು ಆರೋಪಿತರನ್ನು ಈ ಪ್ರಕರಣದಲ್ಲಿ ಸಿಕ್ಕಿಸಲು ಮಹಜರ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರವರು ಬೆಲೆ ಬಾಳುವ ನಿವೇಶನ , ಮನೆ ಮತ್ತು ಆಭರಣಗಳನ್ನು ಕಬಳಿಸುವ ಉದೇಶದಿಂದ ಆರೋಪಿತರ ಮೇಲೆ ಸುಳ್ಳು ದೂರು ಕೊಟ್ಟಿದ್ದು ನಾನು ಸುಳ್ಳು ದೋಷರೋಪಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳ ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿರುವುದಿಲ್ಲ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಟೋಗಳನ್ನು ಠಾಣೆಯಲ್ಲಿ ಮಹಜರ್ ಮಾಡಿದ ನಂತರ ಸ್ಥಳಕ್ಕೆ ಹೋಗಿ ಪೊಟೋಗಳನ್ನು ತೆಗೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪೊಟೋಗಳನ್ನು ನಮ್ಮ ಸಿಬ್ಬಂದಿ ತೆಗೆದಿರುತ್ತಾರೆ. ಸದರಿ ಪೊಟೋಗಳನ್ನು ನಮ್ಮ ಠಾಣೆಯಲ್ಲಿ ಪ್ರಿಂಟ್ ತೆಗೆದಿರುತ್ತಾರೆ. ಸದರಿ ಪೊಟೋಗಳನ್ನು ಈ ಪ್ರಕರಣಕೊಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸುಮಿತ್ರಮ್ಮಳ ಅಂತ್ಯಸಂಸ್ಕಾರವನ್ನು ಚಾಸಾ-1, 2 ಮತ್ತು ಎಲ್ಲಾ ಸಂಬಧಿಕರು ಸೇರಿ ಮಾಡಿರುತ್ತಾರೆ ಎಂದರೆ ನಿಜ.

ಮೃತ ಸುಮಿತ್ರಮ್ಮ ರವರ ಅಂತ್ಯಸಂಸ್ಕಾರಿಕ್ಕಿಂತ ಮೊದಲು ಸುಮಿತ್ರಮ್ಮ ಸಂಪಿಗೆ ಬಿದ್ದು ತೀರಿಕೊಂಡಿರುತ್ತಾಳೆಂದು ನಮ್ಮ ಪೊಲೀಸ್ ಠಾಣೆಗೆ ದೂರು ಕೊಟ್ಟಿರುವುದಿಲ್ಲ ಮತ್ತು ಸಂಪಿನಿಂದ ಹೆಣ ತೆಗೆದ ಮೇಲೂ ದೂರು ಕೊಟ್ಟಿರುವುದಿಲ್ಲ.

ನ್ಯಾಯಾಲಯದ ಸಮಯ ಮದ್ಯಾಹ್ನ **2-00** ಗಂಟೆ ಆದ ಕಾರಣ ಪಾಟೀ ಸವಾಲನ್ನು ಮದ್ಯಾಹ್ನ **3-00** ಗಂಟೆಗೆ ಮುಂದೂಡಲಾಯಿತು.

ಸಾಕ್ಷಿಯನ್ನು ಪುನಃ ಮದ್ಯಾಹ್ನ **3-40** ಗಂಟೆಗೆ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಿರ್ಯಾದಿಯಲ್ಲಿ ಯಾರಿಗೂ ಅನುಮಾನ ಬರಬಾರದ ಎಂಬ ಉದ್ದೇಶದಿಂದ ಸಂಪಿನ ಪಕ್ಕದಲ್ಲಿದ್ದ ಹಗ್ಗದಿಂದ ಕಟ್ಟಿರುವ ಬಿಂದಿಗೆಯನ್ನು ಇಟ್ಟು ನಾವು ಮಾಡಿರುವ ಕೊಲೆಯನ್ನು ಮುಚ್ಚಿಹಾಕಿದೇವು ಎಂದು ಹೇಳಿದ್ದಾರೆ ಎಂದರೆ ನಿಜ, ನಾವು ಹಗ್ಗದಿಂದ ಕಟ್ಟಿರುವ ಬಿಂದಿಗೆಯನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ಸ್ವತಃ ಹೇಳುವುದೇನೆಂದರೆ ಪಿರ್ಯಾದಿ ಘಟನೆಯಾದ 15 ದಿವಸಕ್ಕೆ ಕೊಟ್ಟಿರುತ್ತಾರೆ. ಬಿಂದಿಗೆ ಮತ್ತು ಹಗ್ಗವನ್ನು ಕೃತ್ಯಕ್ಕೆ ಬಳಸದೇ ಇರುವುದರಿದ ನಾನು ಅದರ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ ಮತ್ತು ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಿಪಿ-13 ರ ಸಮಯದಲ್ಲಿ ಆರೋಪಿ-1 ಮಾತ್ರ ಹಾಜರಿದ್ದರು. ಉಪ-ವಿಭಾಗಾಧಿಕಾರಿಗಳಿಗೆ ಪತ್ರವನ್ನು ದಿ.16.02.2022 ರಂದು ಬರೆದಿದ್ದೇವೆ ಎಂದರೆ ನಿಜ. ಆದರೆ ಮಾನ್ಯ ನ್ಯಾಯಾಧೀಶರ ಆದೇಶದ ನಂತರ ದಿ. 17.02.2022 ರಂದು ಉಪ-ವಿಭಾಗದಿಕಾರಿಗಳಿಗೆ ಕೊಟ್ಟಿರುತ್ತೇವೆ. ತಹಸೀಲ್ದಾರ್ ರವರು ನಮಗೆ ಪಂಚನಾಮೆ ಕಾಲಕ್ಕೆ ಹಾಜರಿರುವಂತೆ ಪತ್ರ ಬರೆದಿದ್ದರು. ಸದರಿ ಪತ್ರ ನನ್ನ ಕಡತದಲ್ಲಿ ಇರುತ್ತದೆ. ಅದನ್ನು ಈಗಲೇ ಪರವಾನಿಗೆ ಕೊಟ್ಟರೆ ಹಾಜರುಪಡಿಸುತ್ತೇನೆ. ಆದರೆ ದೋಷರೋಪಣ ಪತ್ರದ ಜೊತೆಗೆ ಹಾಜರುಪಡಿಸಿರುವುದಿಲ್ಲ.

ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿರುವುದಿಲ್ಲ , ಠಾಣೆಯಲ್ಲಿ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಕೇವಲ ದೂರಿನ ಆಧಾರದ ಮೇಲೆ ಯಾವುದೇ ರೀತಿಯಿಂದ ಸರಿಯಾಗಿ ತನಿಖೆ ಮಾಡದೇ ನಾನು ದೋಷರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನಿಪಿ-47 ಮತ್ತು 48 ರಂತೆ ಸ್ವ ಇಚ್ಚೆ ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ

ಆರೋಪಿ ಚಾಸಾ-1 ರವರ ಮುಂದೆ ಯಾವುದೇ ರೀತಿಯ ತಾನು ಕೊಲೆ ಮಾಡಿದ್ದೇನೆ ಎಂದು ಹೇಳದೇ ಇದ್ದರೂ ಚಾಸಾ-1 ಸುಳ್ಳು ದೂರು ಕೊಟ್ಟಿದ್ದು ನಾವು ಸರಿಯಾಗಿ ತನಿಖೆ ನಡೆಸದೇ ಸುಳ್ಳು ದೋಷರೋಪಣ ಪತ್ರ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಸಂಚು ರೂಪಿಸಿ ಸುಮಿತ್ರಮ್ಮ ರವರನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ಮತ್ತು 2 ನೇ ಆರೋಪಿತರಿಗೆ ಯಾವುದೇ ರಿತೀಯ ಗಾಯಗಳು ಆಗದೇ ಇದ್ದರೂ ಈ ಪ್ರಕರಣಕೊಸ್ಕರ ವೈದ್ಯಾಧಿಕಾರಿಗಳ ಜೊತೆ ಶಾಮೀಲಾಗಿ ನಿಪಿ-37 ಮತ್ತು 38 ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಆರೋಪ ದೃಢಪಡದೇ ಇದ್ದರೂ ಕೂಡ ಸುಳ್ಳು ದೋಷರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಸಾಕ್ಷಿದಾರರು ಚಾಸಾ-2 ರಿಂದ 6 , 10 ರಿಂದ 21, 36, 39 ರಿಂದ 44 ರವರುಗಳು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಸದರಿ ಹೇಳಿಕೆಗಳನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶಂದ ಸುಳ್ಳು ದೋಷರೋಪಣ ಪತ್ರ ಸಲ್ಲಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**